ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	:	ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	740
ಉತ್ತರಿಸಬೇಕಾದ ದಿನಾಂಕ	:	10.03.2020

ಕ್ರಸಂ	ಪ್ರಶ್ನೆ	ಉತ್ತರ
ಅ.	ಕರ್ನಾಟಕ ರಾಜ್ಯ ಸಹಕಾರಿ ಅಧಿನಿಯಮದಡಿ ಒಟ್ಟು ಎಷ್ಟು ಸಹಕಾರಿ ಬ್ಯಾಂಕುಗಳು ನೋಂದಾಯಿತವಾಗಿವೆ. (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 266 ಪಟ್ಟಣ ಸಹಕಾರ ಬ್ಯಾಂಕುಗಳು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರಡಿ, 18 ಸೌಹಾರ್ದ ಸಹಕಾರ ಬ್ಯಾಂಕುಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿ ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿವೆ. ಕೃಷಿ ಸಾಲ ನೀಡುವ ಉದ್ದೇಶಕ್ಕಾಗಿ ಇರುವ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ರಾಜ್ಯ ಮಟ್ಟದಲ್ಲಿ ಕರ್ನಾಟಕ ಸಹಕಾರ ಅಪೆಕ್ಸ್ ಬ್ಯಾಂಕ್ ನಿ. ಮತ್ತು ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಕಾರ್ಯನಿರ್ವಹಿಸುತ್ತಿವೆ.. ಜಿಲ್ಲಾವಾರು ಮಾಹಿತಿ ಕೆಳಕಂಡಂತಿರುತ್ತದೆ.

ಕ್ರಸಂ	ಜಿಲ್ಲೆಯ ಹೆಸರು	ಸಹಕಾರ ಬ್ಯಾಂಕುಗಳ ಸಂಖ್ಯೆ	ಸೌಹಾರ್ದ ಸಹಕಾರಿಗಳು	ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು
1.	ಬೆಂಗಳೂರು ನಗರ	50	04	01
2.	ರಾಮನಗರ	2		–
3.	ತುಮಕೂರು	13	01	01
4.	ಕೋಲಾರ	0		01
5.	ಚಿಕ್ಕಬಳ್ಳಾಪುರ	0		–
6.	ಚಿತ್ರದುರ್ಗ	3	02	01
7.	ದಾವಣಗೆರೆ	12		01
8.	ಶಿವಮೊಗ್ಗ	8		01
9.	ಮೈಸೂರು	10		01
10.	ಚಾಮರಾಜನಗರ	1		–
11.	ಮಂಡ್ಯ	3		01
12.	ಹಾಸನ	5		01
13.	ಚಿಕ್ಕಮಗಳೂರು	3		01
14.	ಕೊಡಗು	4		01
15.	ದಕ್ಷಿಣ ಕನ್ನಡ	8		01
16.	ಉಡುಪಿ	6		–
17.	ಬೆಳಗಾವಿ	38	02	01
18.	ವಿಜಯಪುರ	19		01
19.	ಬಾಗಲಕೋಟೆ	14		01
20.	ಧಾರವಾಡ	11		01
21.	ಗದಗ	07	02	–
22.	ಹಾವೇರಿ	10		–
23.	ಉತ್ತರ ಕನ್ನಡ	09		01
24.	ಬಳ್ಳಾರಿ	05	04	01
25.	ಬೀದರ	04		01
26.	ಕಲಬುರಗಿ	09		01
27.	ರಾಯಚೂರು	05	01	01
28.	ಕೊಪ್ಪಳ	07	02	–
	ಒಟ್ಟು	**266**	**18**	**21**

ಆ	ಈವರೆಗೆ ನೋಂದಣಿಯಾದ ಬ್ಯಾಂಕುಗಳಲ್ಲಿ ಎಷ್ಟು ಸಹಕಾರಿ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ;	ಈವರೆಗೆ ನೋಂದಣಿಯಾದ ಬ್ಯಾಂಕುಗಳಲ್ಲಿ 302 ಸಹಕಾರಿ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ.
ಇ	ನೋಂದಾಯಿತ ಬ್ಯಾಂಕುಗಳಲ್ಲಿ ಎಷ್ಟು ಬ್ಯಾಂಕುಗಳು ದಿವಾಳಿಯಾಗಿವೆ ಮತ್ತು ಅವುಗಳ ಪುನಃಶ್ಚೇತನಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ರಾಜ್ಯದಲ್ಲಿ ನೋಂದಾಯಿತ ಸಹಕಾರಿ ಬ್ಯಾಂಕುಗಳ ಪೈಕಿ ಕೆಳಕಂಡ 03 ಬ್ಯಾಂಕುಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಪರವಾನಿಗೆಯನ್ನು (ಲೈಸೆನ್ಸ್) ರದ್ದುಗೊಳಿಸಿರುವ ಹಿನ್ನೆಲೆಯಲ್ಲಿ ಸಮಾಪನೆಗೊಳಿಸಲಾಗಿರುತ್ತದೆ. ಸದರಿ ಸಹಕಾರಿ ಬ್ಯಾಂಕುಗಳನ್ನು ಪುನಃಶ್ಚೇತನಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. 1. ರಾಯಚೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ. 2. ಹಾನಗಲ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ. 3. ತುಮಕೂರು ಪಟ್ಟಣ ಸಹಕಾರ ಬ್ಯಾಂಕ್ ಲಿ.
ಈ	ಸಹಕಾರಿ ಬ್ಯಾಂಕುಗಳಲ್ಲಿ ಇತ್ತೀಚೆಗೆ ಅವ್ಯವಹಾರಗಳು ಹೆಚ್ಚಾಗುತ್ತಿದ್ದು, ಠೇವಣಿದಾರರು ಆತಂಕದಲ್ಲಿದ್ದು, ಅವರ ರಕ್ಷಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?	ಸಾರ್ವಜನಿಕರಿಂದ, ಬ್ಯಾಂಕಿನ ಸದಸ್ಯರಿಂದ, ನಿರ್ದೇಶಕರುಗಳಿಂದ ದೂರುಗಳು ಬಂದಾಗ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 29-ಸಿ ರಡಿ ಆಡಳಿತ ಮಂಡಳಿಯನ್ನು ಅನರ್ಹಗೊಳಿಸುವುದು, ಪ್ರಕರಣ 64 ರ ವಿಚಾರಣೆ, ಪ್ರಕರಣ 65 ರ ಪರಿವೀಕ್ಷಣೆ, ಪ್ರಕರಣ 69 ರಡಿ ಅದಿಭಾರ ದಾಖಲಿಸುವುದು, ಪ್ರಕರಣ 70 ರಡಿ ದಾವೆ ದಾಖಲಿಸಿ ಇತ್ಯರ್ಥಗೊಳಿಸುವುದು, ಪ್ರಕರಣ 103 ರಡಿ ಜಪ್ತಿ ಪೂರ್ವ ಆದೇಶ ಹೊರಡಿಸುವುದು ಹಾಗೂ ತಪ್ಪಿತಸ್ಥರ ವಿರುದ್ಧ ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸಹಕಾರಿ ಬ್ಯಾಂಕುಗಳಲ್ಲಿ ಠೇವಣಿದಾರರು ಇಡುವ ಠೇವಣಿಗಳನ್ನು ರಕ್ಷಣೆ ಮಾಡಲು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ 1949 ಪ್ರಕರಣ 35 ರಡಿಯಲ್ಲಿ ಅವಕಾಶವಿರುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್ ಪ್ರತಿ ವರ್ಷ ಬ್ಯಾಂಕುಗಳ ಪರಿವೀಕ್ಷಣೆ ನಡೆಸಿ ಅದರ ಅನುಪಾಲನಾ ವರದಿಯನ್ನು ಸಲ್ಲಿಸಲು ಸಂಬಂಧಪಟ್ಟ ಬ್ಯಾಂಕುಗಳಿಗೆ ಸೂಚಿಸಲಾಗುತ್ತದೆ. ಠೇವಣಿದಾರರ ಠೇವಣಿಯನ್ನು ರಕ್ಷಣೆ ಮಾಡಿ ಠೇವಣಿದಾರರ ಹಿತವನ್ನು ಕಾಪಾಡುವ ಉದ್ದೇಶದಿಂದಲೇ ಕರ್ನಾಟಕ ಪ್ರೊಟೆಕ್ಷನ್ ಆಫ್ ಇಂಟರೆಸ್ಟ್ ಡಿಪಾಸಿಟರ್ಸ್ (ಕೆಪಿಐಡಿ) ಕಾಯ್ದೆ 2004 ನ್ನು ಜಾರಿಗೆ ತರಲಾಗಿದೆ. ಠೇವಣಿದಾರರ ದೂರು ಬಂದಾಗ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಕಂದಾಯ ಇಲಾಖೆಯು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಸಂಖ್ಯೆ: ಸಿಒ 106 ಸಿಎಲ್ಎಸ್ 2020

(ಎಸ್.ಟಿ ಸೋಮಶೇಖರ್)

ಸಹಕಾರ ಸಚಿವರು.